# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 260 (132) (ವರ್ಗಾವಣೆಗೊಂಡ ಪ್ರಶ್ನೆ) |
| **ಸದಸ್ಯರ ಹೆಸರು** | : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | : 13-09-2022 |
| **ಉತ್ತರಿಸಬೇಕಾದ ಸಚಿವರು** | : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ಶಾಲೆಯೂ ಸೇರಿದಂತೆ ಎಲ್ಲಾ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣೆಯನ್ನು ಮಾಡುವ ಉದ್ದೇಶದಿಂದ ಶಾಲಾ ಮಕ್ಕಳ ರಕ್ಷಣಾ ನೀತಿಯನ್ನು ಅಳವಡಿಸಿಕೊಂಡಿದೆಯೇ; ಈ ನೀತಿಯಿಂದ ಮಕ್ಕಳು ಸರಿಯಾಗಿ ಶಾಲೆಗೆ ಬಂದು ಧೈರ್ಯವಾಗಿ ತಮ್ಮ ಅನಿಸಿಕೆ ಮತ್ತು ಅಭಿಪ್ರಾಯವನ್ನು ತಿಳಿಸಲು ಪೂರಕವಾಗಿದೆಯೇ; | ಹೌದು.<br><br>ಸರ್ಕಾರದ ಆದೇಶ ಸಂಖ್ಯೆ "ಮಮಇ 259 ಮಭಾಬ 2014, ದಿನಾಂಕ:30.04.2016ರಲ್ಲಿ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ "ಮಕ್ಕಳ ಸುರಕ್ಷತಾ ನೀತಿ 2016"ನ್ನು ಜಾರಿಗೆ ತರಲಾಗಿದೆ. ಈ ನೀತಿಯಿಂದಾಗಿ ಮಕ್ಕಳು ಧೈರ್ಯವಾಗಿ ಅನಿಸಿಕೆ, ಅಭಿಪ್ರಾಯವನ್ನು ತಿಳಿಸಬಹುದಾಗಿದೆ. |
| ಆ) | ರಾಜ್ಯ ಸರ್ಕಾರ ಹೇಳಿದ ಶಾಲೆಗಳಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಸರ್ಕಾರದ ಗೆಜೆಟ್ ನಲ್ಲಿ ಪ್ರಕಟಿಸಲಾಗಿದೆಯೇ; | ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸಮಗ್ರವಾಗಿ ಕಾಲಕಾಲಕ್ಕೆ ಅನುಷ್ಠಾನ ಮಾಡುವಂತೆ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದೆ. |
| ಇ) | ಈ ನೀತಿಯನ್ನು ಎಲ್ಲಾ ಸರ್ಕಾರಿ ಅನುದಾನಿತ ಮತ್ತು ಖಾಸಗಿ ಶಾಲೆಗಳು ಒಪ್ಪಿಕೊಂಡು ಅನುಸರಿಸುತ್ತಿದ್ದಾರೆಯೇ; | ಹೌದು. |
| ಈ) | ಯಾವುದಾರೂ ಶಾಲೆಗಳು ಈ ನೀತಿಯನ್ನು ಅಳವಡಿಸಿಕೊಳ್ಳದಿದ್ದಲ್ಲಿ ಅಥವಾ ಉಲ್ಲಂಘಿಸಿದ್ದಲ್ಲಿ ಅವುಗಳ ಮೇಲೆ ಜರುಗಿಸುವ ಕ್ರಮಗಳೇನು: | ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ ಶಿಕ್ಷಣ ಕಾಯ್ದೆಗೆ ತಂದಿರುವ ತಿದ್ದುಪಡಿ ಈ ಮುಂದಿನಂತಿರುತ್ತದೆ. **"5A. Safety and security of students :-** Every educational institution and an employee of such educational institutions shall take such measures to ensure safety and security of students including protection from sexual offences, in the manner as may be prescribed"<br><br>"112A. Penalty for contravention of section 5A :- (1) Any employee or member of the management of an educational institution who contravenes section 5A shall on conviction, be punished with imprisonment for a minimum term of six months and with a fine which may extend to one lakh rupees. |

| | | |
|---|---|---|
| ಉ) | ಈ ರೀತಿಯ ಕ್ರಮಗಳನ್ನು ಜರುಗಿಸುವ ಹೊಣೆಯನ್ನು ಯಾರಿಗೆ ನೀಡಲಾಗಿದೆ? (ವಿವರ ನೀಡುವುದು) | ಮಕ್ಕಳ ಸುರಕ್ಷತಾ ನೀತಿಯನ್ನು ಅಳವಡಿಸಿಕೊಳ್ಳದ ಶಾಲೆಗಳ ವಿರುದ್ಧ ಜಿಲ್ಲಾ District Education Regulatory Authority (DERA) ಸಮಿತಿಯಲ್ಲಿ ದೂರು ದಾಖಲಿಸಬಹುದಾಗಿದೆ. |

**ಸಂಖ್ಯೆ: ಇಪಿ 348 ಪಿಜಿಸಿ 2022**

**(ಬಿ.ಸಿ. ನಾಗೇಶ್)**
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು